# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಬಸವರಾಜ ಶಿವಪ್ಪ ಕಟ್ಟಿಮನಿ, ಉಪಾಧ್ಯಕ್ಷರು, ಶ್ರೀಮತಿ ಪಾರ್ವತೆವ್ವ ಕೋಂ. ಸಹದೇವಪ್ಪ ಪೂಜಾರ, ಸದಸ್ಯರು, ಶ್ರೀಮತಿ ನಿಂಗವ್ವ ಕೋಂ. ಕಲ್ಲಪ್ಪ ಕಟ್ಟಿಮನಿ, ಸದಸ್ಯರು, ಮತ್ತು ಶ್ರೀಮತಿ ಸೋಮಂತೆವ್ವ ಕೋಂ ಚಂದ್ರಶೇಖರ ಈಟಿ, ಸದಸ್ಯರು - ಹಿರೇಹರಕುಣಿ ಗ್ರಾಮ ಪಂಚಾಯತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಧಾರವಾಡ ರವರ ಪತ್ರ ಸಂಖ್ಯೆ: ಧಾಜಿಪಂ/ಉಕಾ/ಸಿ-9/ಸಿಆರ್/47/2017-18/1527, ದಿನಾಂಕ 07.08.2017
2) ಇದೇ ಸಮ ಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ 31.08.2017
3) ಶ್ರೀ ಬಸವರಾಜ ಶಿವಪ್ಪ ಕಟ್ಟಿಮನಿ, ಉಪಾಧ್ಯಕ್ಷರು, ಹಿರೇಹರಕುಣಿ ಗ್ರಾಮ ಪಂಚಾಯತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ಲಿಖಿತ ಹೇಳಿಕೆ, ದಿನಾಂಕ: 26.09.2017
4) ಶ್ರೀಮತಿ ಪಾರ್ವತೆವ್ವ ಕೋಂ. ಸಹದೇವಪ್ಪ ಪೂಜಾರ, ಸದಸ್ಯರು, ಹಿರೇಹರಕುಣಿ ಗ್ರಾಮ ಪಂಚಾಯತಿ, ಕುಂದಗೋಳ ತಾ., ಧಾರವಾಡ ಜಿಲ್ಲೆ ಇವರ ಲಿಖಿತ ಹೇಳಿಕೆ, ದಿ.26.09.2017
5) ಶ್ರೀಮತಿ ನಿಂಗವ್ವ ಕೋಂ. ಕಲ್ಲಪ್ಪ ಕಟ್ಟಿಮನಿ, ಸದಸ್ಯರು, ಹಿರೇಹರಕುಣಿ ಗ್ರಾಮ ಪಂಚಾಯತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ಲಿಖಿತ ಹೇಳಿಕೆ, ದಿನಾಂಕ: 26.09.2017
6) ಶ್ರೀಮತಿ ಸೋಮಂತೆವ್ವ ಕೋಂ. ಚಂದ್ರಶೇಖರ ಈಟಿ, ಸದಸ್ಯರು, ಹಿರೇಹರಕುಣಿ ಗ್ರಾಮ ಪಂಚಾಯತಿ, ಕುಂದಗೋಳ ತಾ., ಧಾರವಾಡ ಜಿಲ್ಲೆ. ಇವರ ಲಿಖಿತ ಹೇಳಿಕೆ, ದಿ.26.09.2017
7) ಸರ್ಕಾರದ ಸಮ ಸಂಖ್ಯೆಯ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ, ದಿನಾಂಕ 05.12.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಧಾರವಾಡ ಜಿಲ್ಲಾ ಪಂಚಾಯತಿ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಕುಂದಗೋಳ ತಾಲ್ಲೂಕಿನ ಹಿರೇಹರಕುಣಿ ಗ್ರಾಮ ಪಂಚಾಯತಿಯಲ್ಲಿ 2014 ರಿಂದ 2017 ನೇ ಸಾಲಿನವರೆಗೆ ವಿವಿಧ ವಸತಿ ಯೋಜನೆಯಲ್ಲಿ ಮಂಜೂರಾದ ಮನೆಗಳಲ್ಲಿ ಅವ್ಯವಹಾರದ ಕುರಿತು ಪರಿಶೀಲನೆ ಮಾಡಿ ಮುಖ್ಯ ಯೋಜನಾಧಿಕಾರಿಗಳು, ಜಿ.ಪಂ ಧಾರವಾಡ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾ.ಪಂ. ಕುಂದಗೋಳ ಇವರು ಅವ್ಯವಹಾರ ಆಗಿರುವುದಾಗಿ ಪರಿಶೀಲನಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಸದಸ್ಯರುಗಳು ವಸತಿ ಯೋಜನೆಯಡಿಯಲ್ಲಿ ಸಂಪೂರ್ಣ ಭಾಗಿಯಾಗಿ ಅಧಿಕಾರಿ ದುರುಪಯೋಗಪಡಿಸಿಕೊಂಡಿರುವುದಾಗಿ ತಿಳಿಸಿ, ಪರಿಶೀಲನಾ ವರದಿಯಲ್ಲಿ ಕೆಳಗಿನಂತೆ ತಿಳಿಸಿರುತ್ತಾರೆ.

1. ಗ್ರಾ.ಪಂ ಉಪಾಧ್ಯಕ್ಷರಾದ ಶ್ರೀ ಬಸವರಾಜ ಶಿವಪ್ಪ ಕಟ್ಟಿಮನಿ ಇವರು 2015-16 ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಮಾಡುವಲ್ಲಿ ವಸತಿ ಯೋಜನೆ ಮಾರ್ಗಸೂಚಿಗಳನ್ನು ಉಲ್ಲಂಘಿಸಿ, ಹುದ್ದೆಯ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ತಮ್ಮ ತಾಯಿಯವರ ಹೆಸರಿನಲ್ಲಿ ಮನೆ ಮಂಜೂರು ಮಾಡಿಸಿಕೊಂಡು ರೂ. 59,800/- ಅನುದಾನ ಪಡೆದುಕೊಂಡಿರುತ್ತಾರೆ.
2. ಗ್ರಾ.ಪಂ ಸದಸ್ಯರಾದ ಶ್ರೀಮತಿ. ಪಾರ್ವತೆವ್ವ ಕೋಂ. ಸಹದೇವಪ್ಪ ಪೂಜಾರ ಇವರು ವಸತಿ ಯೋಜನೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ತಮ್ಮ ಸೊಸೆಯ ಹೆಸರಿನಲ್ಲಿ ಮನೆ ಮಂಜೂರಿ ಮಾಡಿಸಿಕೊಂಡಿರುತ್ತಾರೆ.
3. ಗ್ರಾ.ಪಂ ಸದಸ್ಯರಾದ ಶ್ರೀಮತಿ. ನಿಂಗವ್ವ ಕೋಂ. ಕಲ್ಲಪ್ಪ ಕಟ್ಟಿಮನಿ ಇವರು ವಸತಿ ಯೋಜನೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ತಮ್ಮ ಸೊಸೆಯ ಹೆಸರಿನಲ್ಲಿ ಮನೆ ಮಂಜೂರಿ ಮಾಡಿಸಿಕೊಂಡಿರುತ್ತಾರೆ. ಆದರೆ ವಸತಿ ನಿಗಮದಿಂದ ಅನುಮೋದನೆಯಾಗಿರುವುದು ಕಂಡು ಬಂದಿರುವುದಿಲ್ಲ.

4. ಗ್ರಾ.ಪಂ ಸದಸ್ಯರಾದ ಶ್ರೀಮತಿ. ಸೋಮಂತೆವ್ವ ಕೋಂ. ಚಂದ್ರಶೇಖರ ಈಟಿ ಇವರು ಗ್ರಾ.ಪಂ ಸದಸ್ಯರಿದ್ದು ಇವರು 2015-16ನೇ ಸಾಲಿನ ವಸತಿ ಯೋಜನೆ ಮಾರ್ಗಸೂಚಿ ಪ್ರಕಾರ ಫಲಾನುಭವಿಗಳನ್ನು ಆಯ್ಕೆ ಮಾಡದೇ ಮಾರ್ಗಸೂಚಿ ಉಲ್ಲಂಘಿಸಿ ತಮ್ಮ ಸೊಸೆಯ ಹೆಸರಿನಲ್ಲಿ ಹೆಸರಿನಲ್ಲಿ ಮನೆ ಮಂಜೂರಿ ಮಾಡಿಸಿಕೊಂಡು ರೂ. 59,800/- ಅನುದಾನ ಫಲಾನುಭವಿಯ ಖಾತೆಗೆ ಜಮೆಯಾಗಿರುತ್ತದೆ.

ಮೇಲೆ ಓದಲಾದ (2) ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸಿ, ಗ್ರಾಮ ಪಂಚಾಯತಿ ಸದಸ್ಯ ಸ್ಥಾನದಿಂದ ಏಕೆ ತೆಗೆದು ಹಾಕಬಾರದು ಎಂಬುದರ ಬಗ್ಗೆ ವಿವರಣೆ ನೀಡುವಂತೆ ಸದರಿ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (3) ರಲ್ಲಿ ಸದರಿ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳು ಸರ್ಕಾರದಿಂದ ಜಾರಿಗೊಳಿಸಲಾಗಿದ್ದ ಕಾರಣ ಕೇಳಿ ನೋಟಿಸಿಗೆ ಕೆಳಗಿನಂತೆ ಉತ್ತರವನ್ನು ಸಲ್ಲಿಸಿರುತ್ತಾರೆ.

"ಸರಕಾರದ ಯಾವುದೇ ಯೋಜನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರ ವಾರ್ಡ/ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ ಯಾವ ಪಂಚಾಯತಿ ಸದಸ್ಯರಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರ ಇರುವುದಿಲ್ಲ. 2015-16 ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ವಸತಿ ಮಾರ್ಗಸೂಚಿ ಪ್ರಕಾರ ಅವರ ಅರ್ಹತೆಯನ್ನು ಪರಿಗಣಿಸಿ ಫಲಾನುಭವಿಯನ್ನಾಗಿ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗಿದೆ. ಆದರೆ ಈ ಆಯ್ಕೆಯಲ್ಲಿ ನಮ್ಮದು ಯಾವುದೇ ಪಾತ್ರ ಇರುವುದಿಲ್ಲ. ಅಲ್ಲದೇ ನಮಗೆ ನೀಡಲಾದ ಅಧಿಕಾರದ ಪ್ರಭಾವ ಬೀರಿರುವುದಿಲ್ಲ ಹಾಗೂ ಅಧಿಕಾರ ದುರುಪಯೋಗ ಪಡಿಸಿಕೊಂಡು ಫಲಾನುಭವಿಗಳ ಆಯ್ಕೆಯಲ್ಲಿ ನಮ್ಮದು ಯಾವುದೇ ಪಾತ್ರ ವಹಿಸಿರುವುದಿಲ್ಲ."

ಮೇಲೆ ಓದಲಾದ (4) ರನ್ವಯ, ದಿನಾಂಕ 19.12.2017 ರಂದು ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ನ್ಯಾಯಾಲಯದಲ್ಲಿ ಮೌಖಿಕ ವಿಚಾರಣೆ ಜರುಗಿಸಲಾಗಿ, ಸದರಿ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳು, ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಧಾರವಾಡ ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ. ವಿಚಾರಣಾ ಸಂದರ್ಭದಲ್ಲಿ ಸದರಿ ಫಲಾನುಭವಿಗಳನ್ನು ನಿಯಮಾನುಸಾರ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗಿದ್ದು, ಸದರಿ ಫಲಾನುಭವಿಗಳು ಮನೆಯನ್ನು ನಿರ್ಮಿಸಿ, ಸಹಾಯಧನ ಪಡೆದಿರುತ್ತಾರೆ. ನಿವೇಶನ ಲಭ್ಯವಿಲ್ಲದವರು ಯಾವುದೇ ಅನುದಾನ ಪಡೆದಿರುವುದಿಲ್ಲ. ಸದರಿಯವರ ಆಯ್ಕೆಯಲ್ಲಿ ನಮ್ಮ ಅಧಿಕಾರದ ಪ್ರಭಾದ ಹಾಗೂ ದುರುಪಯೋಗ ಇರುವುದಿಲ್ಲವೆಂದು ಸದರಿ ಚುನಾಯಿತ ಪ್ರತಿನಿಧಿಗಳು ಹೇಳಿಕೆ ನೀಡಿರುತ್ತಾರೆ. ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಹ ಸದರಿ ಫಲಾನುಭವಿಗಳು ಮನೆಯನ್ನು ನಿರ್ಮಿಸಿ, ಸಹಾಯಧನ ಪಡೆದಿರುತ್ತಾರೆ. ನಿವೇಶನ ಲಭ್ಯವಿಲ್ಲದವರು ಯಾವುದೇ ಅನುದಾನ ಪಡೆದಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಆಪಾದಿತರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿ, ಸದರಿ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳ ಸಂಬಂಧಿಕರನ್ನು ವಸತಿ ಯೋಜನೆಯಡಿ ಫಲಾನುಭವಿಗಳನ್ನಾಗಿ ಗ್ರಾಮ ಸಭೆಯಲ್ಲಿ ನಿಯಮಾನುಸಾರ ಆಯ್ಕೆ ಮಾಡಲಾಗಿದ್ದು, ಆಯ್ಕೆಯಲ್ಲಿ ಇವರ ಪಾತ್ರ ಇರುವುದು ಕಂಡುಬಂದಿಲ್ಲದಿರುವುದರಿಂದ ಇನ್ನು ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ನೀಡಿ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣದ 43(ಎ) ರಂತೆ ಪ್ರಾರಂಭಿಸಿರುವ ವಿಚಾರಣೆಯನ್ನು ಕೈಬಿಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 989 ಗ್ರಾಪಂಅ 2017, ಬೆಂಗಳೂರು, ದಿನಾಂಕ: 06.03.2018**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳ ಸಂಬಂಧಿಕರನ್ನು ವಸತಿ ಯೋಜನೆಯಡಿ ಫಲಾನುಭವಿಗಳನ್ನಾಗಿ ಗ್ರಾಮ ಸಭೆಯಲ್ಲಿ ನಿಯಮಾನುಸಾರ ಆಯ್ಕೆ ಮಾಡಲಾಗಿದ್ದು, ಫಲಾನುಭವಿಗಳ ಆಯ್ಕೆಯಲ್ಲಿ ಇವರ ಪಾತ್ರ ಇರುವುದು ಸಾಬೀತಾಗದಿರುವ ಹಿನ್ನೆಲೆಯಲ್ಲಿ, ಶ್ರೀ ಬಸವರಾಜ ಶಿವಪ್ಪ ಕಟ್ಟಿಮನಿ, ಉಪಾಧ್ಯಕ್ಷರು, ಶ್ರೀಮತಿ ಪಾರ್ವತೆವ್ವ ಕೋಂ. ಸಹದೇವಪ್ಪ ಪೂಜಾರ, ಸದಸ್ಯರು, ಶ್ರೀಮತಿ ನಿಂಗವ್ವ ಕೋಂ. ಕಲ್ಲಪ್ಪ ಕಟ್ಟಿಮನಿ, ಸದಸ್ಯರು, ಮತ್ತು ಶ್ರೀಮತಿ ಸೋಮಂತೆವ್ವ ಕೋಂ ಚಂದ್ರಶೇಖರ ಈಟಿ, ಸದಸ್ಯರು – ಹಿರೇಹರಕುಣಿ ಗ್ರಾಮ ಪಂಚಾಯತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ ಇವರುಗಳಿಗೆ ಎಚ್ಚರಿಕೆ ನೀಡಿ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣದ 43(ಎ) ರಂತೆ ಪ್ರಾರಂಭಿಸಿರುವ ವಿಚಾರಣೆಯನ್ನು ಕೈಬಿಟ್ಟು, ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
6/3
(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಧಾರವಾಡ ಜಿಲ್ಲಾ ಪಂಚಾಯತಿ, ಧಾರವಾಡ.
2) ಕಾರ್ಯನಿರ್ವಾಹಕ ಅಧಿಕಾರಿ, ಕುಂದಗೋಳ ತಾಲ್ಲೂಕು ಪಂಚಾಯತಿ, ಕುಂದಗೋಳ, ಧಾರವಾಡ ಜಿಲ್ಲೆ.
3) ಶ್ರೀ ಬಸವರಾಜ ಶಿವಪ್ಪ ಕಟ್ಟಿಮನಿ, ಉಪಾಧ್ಯಕ್ಷರು, ಹಿರೇಹರಕುಣಿ ಗ್ರಾಮ ಪಂಚಾಯತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ.
4) ಶ್ರೀಮತಿ ಪಾರ್ವತೆವ್ವ ಕೋಂ. ಸಹದೇವಪ್ಪ ಪೂಜಾರ, ಸದಸ್ಯರು, ಹಿರೇಹರಕುಣಿ ಗ್ರಾಮ ಪಂಚಾಯತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ.
5) ಶ್ರೀಮತಿ ನಿಂಗವ್ವ ಕೋಂ. ಕಲ್ಲಪ್ಪ ಕಟ್ಟಿಮನಿ, ಸದಸ್ಯರು, ಹಿರೇಹರಕುಣಿ ಗ್ರಾಮ ಪಂಚಾಯತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ.
6) ಶ್ರೀಮತಿ ಸೋಮಂತೆವ್ವ ಕೋಂ ಚಂದ್ರಶೇಖರ ಈಟಿ, ಸದಸ್ಯರು, ಹಿರೇಹರಕುಣಿ ಗ್ರಾಮ ಪಂಚಾಯತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ.
7) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಹರಕುಣಿ ಗ್ರಾಮ ಪಂಚಾಯತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ.
8) ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9) ಕಛೇರಿ ಪ್ರತಿ / ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾ.ಅ. & ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.